and promotions would be the subjct-matters of discussion. I have been instructing my officers that so far as these subjects are concerned, they must be referred to the highest level and that they should not deal with these subjects.

COLONY OF BACKWARD CLASS PEOPLE IN SAVEMARADI KAVAL.

168. Sri HANJI SHIVANNA (Tarikere).—

Will the Minister for Community Development and Social Welfare be pleased to state:—

(*a*) whether the Governmnet have formed a colony for backward class people in Savemaradi Kaval, Amritapur Hobli of Tarikere Taluk;

(*b*) if so, the amount spent by the Government on this colony;

(*c*) the extent of land Granted for them;

(*d*) the number of families living in this colony at present;

(*e*) who are in possession of these lands;

(*f*) whether it has come to the notice of the Government that some rich people have purchased the lands from backward class people and evicted them?

Sri M. MALLIKARJUNASWAMY (Minister for Community Development and Social Welfare).—

(*a*) Yes.

(*b*) Rs. 18,000.

(*c*) In Survey No. 1,—200 acres.

(*d*) 10 families are staying.

(*e*) Except 70 Acres and 16 Guntas of land which is alienated the rest of the land is in possession of the residents of the colony.

(f) Some familes have left the colony after selling their lands to others. This sale is not valid. Action is taken to take back the land from those who had acquired the lands unauthorisedly.

ಶ್ರೀ ಹಂಜಿ ಶಿವಣ್ಣ.—ಉತ್ತರದಲ್ಲಿ 200 ಎಕರೆ ಪ್ರದೇಶ ಕೊಡಲಾಗಿದೆ, 10 ಸಂಸಾರಗಳು ವಾಸಿಸುತ್ತಿವೆ ಎಂದಿದೆ. ಒಂದು ಸಂಸಾರಕ್ಕೆ ಎಷ್ಟು ಎಕರೆ ಭೂಮಿ ಕೊಡಲಾಗಿದೆ? ಎಷ್ಟು ಸಂಸಾರಗಳಿಗೆ ಕೊಟ್ಟಿದೆ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—30 ಸಂಸಾರಗಳಿಗೆ ಕೊಡಲಾಗಿದೆ. 200 ಎಕರೆ 30 ಸಂಸಾರಗಳಿಗೆ ಹಂಚಿದರೆ ಒಂದು ಸಂಸಾರಕ್ಕೆಷ್ಟು ಕೊಡಲಾಗಿದೆ ಎಂಬುದು ಗೊತ್ತಾಗುವುದು.

ಶ್ರೀ ಹಂಜಿ ಶಿವಣ್ಣ.—ಈಗ 10 ಸಂಸಾರಗಳು ವಾಸಿಸುತ್ತಿವೆ. ಉಳಿದ ಸಂಸಾರಗಳಿಗೆ ಕೊಟ್ಟ ಜಮೀನೇನಾಯ್ತು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಉತ್ತರದಲ್ಲಿ ಅದನ್ನು ತಿಳಿಸಲಾಗಿದೆ. ನುಮಾರು 70 ಎಕರೆ 16 ಗುಂಟೆ ಜಮೀನನ್ನು ಕೊಡಲಾಗಿತ್ತು ಅದನ್ನು ತೆಗೆದುಕೊಂಡವರು ಅನುಕೂಲ ಸ್ಥರಿಗೆ ಮಾರಿದ್ದಾರೆ. ಅದು ಸರಿಯಲ್ಲ. ಅವರು ಮಾರುವುದಕ್ಕೆ ಅವರಿಗೆ ಹಕ್ಕಿಲ್ಲ. ತಹಸಿಲ್ದಾರರು ಸಾಗುವಳಿ ಚೀಟಿ ಕೊಟ್ಟಾಗ 15 ವರ್ಷ ಪರಭಾರೆ ಮಾಡಬಾರದೆಂದು ಷರತ್ತು ಹಾಕಿದ್ದಾರೆ. ಆ ಷರತನ್ನು ಅವರು ಮುರಿದಿದ್ದಾರೆ. ಆದುದರಿಂದ ಕೊಂಡವರಿಗೆ ಹಕ್ಕು ದೊರೆಯುವುದಿಲ್ಲ. ಯಾರು ಅತಿಕ್ರಮ ಪ್ರವೇಶ ಮಾಡಿರುವರೋ ಅವರಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೇಳಿದಂತೆ 70 ಎಕರೆ 16 ಗುಂಟೆ ಪರಭಾರೆ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಯಾವಾಗ ಬಂತು ; ಮತ್ತು ಬಂದಮೇಲೆ ಅಕ್ರಮವಾಗಿ ಇರುವವರನ್ನು ಹೊರಗೆ ಹಾಕುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಾಗೆ ಗಮನಕ್ಕೆ ಬಂದಮೇಲೆ ನಾವು ಅಧಿಕಾರಿಗಳಿಗೆ ಅದರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದೇವೆ ಯಾವ್ಯಾವ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ, ಅವುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನು ಮುಂದೆ ಹರಿಜನ ಗಿರಿಜನರಿಗೆ ಮತ್ತು ಭೂಹೀನರಿಗೆ ಭೂಮಿ ಕೊಟ್ಟಮೇಲೆ ಅದನ್ನು ಪರಭಾರೆ ಮಾಡಕೂಡದು ಎಂದು ಕಾನೂನು ಮೂಲಕ ನಿಬಂಧನೆಗಳನ್ನು ಹಾಕಿ, ಅದನ್ನು ಯಾರೂ ತೆಗೆದುಕೊಳ್ಳದ ಹಾಗೆ ನಿರ್ಬಂಧವನ್ನು ಹಾಕುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಈಗಲೂ ಇದೆ. ಅದನ್ನು ಮತ್ತೆ ನಾವು ಹೇಳಬೇಕಾಗಿಲ್ಲ.

ಶ್ರೀ ಸಿ. ಬೈರೇಗೌಡ.—ರಾಜ್ಯಾದ್ಯಂತ ಲಕ್ಷಾಂತರ ಮಂದಿ ಇಂತಹ ಜಮೀನುಗಳನ್ನು ಮಾರಿರತಕ್ಕ ನಿದರ್ಶನಗಳು ಇವೆ. ಇವನ್ನೆಲ್ಲಾ ತಡೆಗಟ್ಟುವುದಕ್ಕೆ ಒಂದು ಶಾಶ್ವತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಯನ್ನು ಕೊಡುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಪರಭಾರೆ ಮಾಡಕೂಡದು ಎಂಬ ನಿಬಂಧನೆ ಈಗಲೂ ಇದೆ ಎಂದು ಹೇಳಿದ್ದೀರಿ. ಈಗಿರುವಂತೆ 10-15 ವರ್ಷ ಪರಭಾರೆ ಮಾಡಕೂಡದು ಎಂದು ಇದೆ ಇದನ್ನು ಕೊನೆಯವರೆಗೆ ಯಾರಿಗೂ ಪರಭಾರೆ ಮಾಡಕೂಡದು ಎಂದು ಒಂದು ಪರ್ಮನೆಂಟ್ ಆರ್ಡರ್ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಾಗೆ ಕಾನೂನು ಪ್ರಕಾರ ಮಾಡುವುದಕ್ಕೆ ಬರುವುದಿಲ್ಲ. ಆದರೂ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಹಂಜಿ ಶಿವಣ್ಣ.—ಇಲ್ಲಿ 70 ಎಕರೆ 16 ಗುಂಟೆ ಪರಭಾರೆ ಮಾಡಿದ್ದಾರೆಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದ ಮಾತು. ನಮಗೆ ಅಧಿಕಾರಿಗಳು ಸರಿಯಾದ ಉತ್ತರವನ್ನು ಕಳಿಸಿಲ್ಲ. ಆದ್ದರಿಂದ ಇದನ್ನು ಕೂಡಲೇ ವಿಚಾರಣೆ ಮಾಡಿ, ಯಾರಾದರೂ ಸುಳ್ಳು ಉತ್ತರ ಕಳಿಸಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

Sri M. MALLIKARJUNASWAMY.—If it is a wrong report it will cost their job. We will definitely take action against such people.